[Govt. of Karnataka C.R.P. 67]

| Deposition Sheets (RP.No.57) Form No.4 (Civil) |
| --- |

IN THE COURT OF CIVIL JUDGE & J.M.F.C., KARKALA.

Criminal Case No. 500/2023

...................................................Vs....................................

ಸಾಕ್ಷಿದಾರಳ ಹೆಸರು ಃ ವಿದ್ಯಾ ನಾಯಕ್ ಪಿ.ಡಬ್ಲ್ಯೂಃ 10

ಗಂಡನ ಹೆಸರುಃ ಗಣೇಶ್ ನಾಯಕ್ ಸಿ.ಡಬ್ಲ್ಯೂಃ 15

ಪ್ರಾಯ ಃ 41 ವರ್ಷ

ಉದ್ಯೋಗ ಃ ಮಹಿಳಾ ಡಬ್ಲ್ಯೂ ಹೆಚ್ ಸಿ. 2041 ಮಣಿಪಾಲ ಪೋಲಿಸ್ ಠಾಣೆ

ವಾಸ ಃ ಹಿರಿಯಡ್ಕ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 27-02-2026

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರು

ನಾನು 2015 ಜೂನ್ ನಿಂದ 2024 ಜೂನ್ ವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮಹಿಳಾ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04-12-2022 ರಂದು ರಾತ್ರಿ ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಮಧ್ಯ ರಾತ್ರಿ 12.30 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಕ್ರಮಾಂಕ ಸಂಃ 145/2022 ಕಲಂ 457, 380 ಐಪಿಸಿ ಅಡಿ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಚಾಸಾ-22 ರವರಿಗೆ ತಕ್ಷೀರು ಸ್ಥಳದ ಮಹಜರು, ನಕಾಶೆ ಮಾಡಲು ಸಹಕರಿಸಿದ್ದು, ಮಹಜರು ಸಮಯದಲ್ಲಿ ದಾಖಲೆಯ ಬೆರಳಚ್ಚು ಮಾಡಿ, ಮಹಜರಿಗೆ ಸಹಿ ಮಾಡಿರುತ್ತೇನೆ. ಮಹಜರು ಸಮಯದಲ್ಲಿ ಪಿಂಕ್ ಬಣ್ಣದ ಸಣ್ಣ ಬ್ಯಾಗ್, ಸ್ಟೀಲ್ ಡಬ್ಬ, ಮುರಿದ ಬೀಗ ವನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.

ದಿಃ 21-12-2021 ರಂದು ಚಾಸಾ-22 ರವರು 2 ನೇ ಆರೋಪಿಯನ್ನು ಪತ್ತೆ ಹಚ್ಚಿ ಹಾಜರುಪಡಿಸುವಂತೆ ಚಾಸಾ-21 ರವರಗೆ ಮೌಖಿಕವಾಗಿ ಆದೇಶ ನೀಡಿದ್ದು, ಅದರಂತೆ 2 ನೇ ಆರೋಪಿತೆಯನ್ನು ಕಲ್ಯಾ ಗ್ರಾಮದ ಹಳೇಕಟ್ಟೆ ಪೇಟೆಯಲ್ಲಿ ಚಾಸಾ-21 ರವರು ವಶಕ್ಕೆ ಪಡೆದಿದ್ದು, ಆ ಸಮಯದಲ್ಲಿ ನಾನು ಚಾಸಾ-21 ರವರಗೆ ಸಹಕರಿಸಿರುತ್ತೇನೆ.

ನಂತರ 2 ನೇ ಆರೋಪಿತೆಯನ್ನು ಚಾಸಾ-21 ರವರು ಚಾಸಾ-23 ರವರ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ಚಾಸಾ-23 ರವರು 2 ನೇ ಆರೋಪಿಯನ್ನು ಮಹಜರು ಮುಖೇನ ದಸ್ತಗಿರಿ ಮಡುವ ಸಮಯದಲ್ಲಿ ನಾನು ಹಾಜರಿದ್ದು, ದಸ್ತಗಿರಿ ಮಹಜರನ್ನು ನಾನು ಬೆರಳಚ್ಚು ಮಾಡಿ, ಸಹಿ ಹಾಕಿರುತ್ತೇನೆ. ಅದೇ ದಿನ 2 ನೇ ಆರೋಪಿ ತೋರಿಸಿಕೊಟ್ಟಂತೆ ಕಲ್ಯಾ ಗ್ರಾಮದ ಕಂಗಿತ್ತು ನಲ್ಲಿರುವ 2 ನೇ ಆರೋಪಿ ಮನೆಯಲ್ಲಿ ಮಧ್ಯಾಹ್ನ 1.30 ಗಂಟೆಯಿಂದ 2.30 ಗಂಟೆಯವರೆಗೆ ಮಹಜರು ಮಾಡಿ, ಭಾವಚಿತ್ರ ತೆಗೆಯುವಾಗ ನಾನು ಹಾಜರಿದ್ದು, ಮಹಜರು ಸಮಯದಲ್ಲಿ 2 ನೇ ಆರೋಪಿಯಿಂದ ಒಂದು ಬಳೆಯನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಷದ್ರಿ ಮಹಜರು ಪ್ರಕ್ರಿಯೆಗೆ ಸಹಕರಿಸಿರುತ್ತೇನೆ. ಘಟನೆ ಕುರಿತು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ-1, ನಿಪಿ-2, ನಿಪಿ-29 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ), ನಿಪಿ-2(ಡಿ), ನಿಪಿ-29(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ.ವ.ವರದಿಯನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ನಕಾಶೆ, ನಿಪಿ-4 ಮತ್ತು ನಿಪಿ-5, ಭಾವಚಿತ್ರ, ನಿಪಿ-19, ನಿಪಿ-21 ರಿಂದ ನಿಪಿ-23 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ ಮು.ಮಾ-3 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ನ್ಯಾಯಾಲಯದ ಮುಂದಿರುವ 2 ನೇ ಆರೋಪಿತೆಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್.ಕೆ. ವಕೀಲರಿಂದಃ

ಚಾಸಾ-1 ರವರು ಲಿಖಿತ ಪಿರ್ಯಾದಿಯನ್ನು ತನ್ನ ಗಂಡನ ಜೊತೆ ಠಾಣೆಗೆ ಬಂದು ನೀಡಿರುತಾರೆ. ದೂರು ಕೊಟ್ಟ ನಂತರ ತಕ್ಷೀರು ಸ್ಥಳಕ್ಕೆ ಅದೇ ದಿನ ರಾತ್ರಿ ಪೋಲಿಸರು ಹೋಗಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ತಕ್ಷೀರು ಸ್ಥಳಕ್ಕೆ ದೂರು ನೀಡಿದ ಬೆಳಗ್ಗೆ ಹೋಗಿದ್ದು ಸಮಯ ಗೊತ್ತಿರುವುದಿಲ್ಲ. ಎಷ್ಟು ಜನರು ಹೋಗಿರುತ್ತೇವೆ ಎಂದು ನೆನಪಿರುವುದಿಲ್ಲ. ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಚಾಸಾ-1 ರವರ ಮನೆಯ ಒಳಗೆ ಹೋಗಿರುವುದಿಲ್ಲ. ನಾನು

ಮಹಜರು ಬೆರಳಚ್ಚು ಮಾಡಿದ್ದನ್ನು ಹೊರತು ಪಡಿಸಿ ಬೇರೆ ವಿಚಾರಗಳು ಗೊತ್ತಿರುವುದಿಲ್ಲ. 2 ನೇ ಆರೋಪಿತೆಯನ್ನು ಕಲ್ಯಾ ಗ್ರಾಮದ ಹಳೇಕಟ್ಟೆ ಪೇಟೆಯಲ್ಲಿ ದಸ್ತಗಿರಿ ಮಾಡಿದ್ದು, ನಿಖರ ಸ್ಥಳ ಹೇಳಲು ಬರುವುದಿಲ್ಲ. ಚಾಸಾ-21 ರವರು 2 ನೇ ಆರೋಪಿತೆಯನ್ನು ದಸ್ತಗಿರಿ ಮಾಡುವಾಗ ಆರೋಪಿಯೊಂದಿಗೆ ಯಾರು ಇರಲಿಲ್ಲ. 2 ನೇ ಆರೋಪಿ ಹಳೇ ಕಟ್ಟೆಗೆ ಯಾಕೆ ಬಂದಿರುತ್ತಾರೆ ಎಂದು ನಾನು ವಿಚಾರಿಸಿರುವುದಿಲ್ಲ. ನಾನು ದಸ್ತಗಿರಿ ಮಹಜರು ಮಾಡಿರುವುದಿಲ್ಲ. ಹಳೇ ಕಟ್ಟೆಯಲ್ಲಿ ಬೆಳ್ಳಿಗ್ಗೆ 11.30 ಗಂಟೆಗೆ 2 ನೇ ಆರೋಪಿತೆಯನ್ನು ವಶಕ್ಕೆ ಪಡೆದಿರುತ್ತೇವೆ.

ದೂರು ದಾಖಲಾದ 17 ದಿನಗಳ ನಂತರ 2 ನೇ ಆರೋಪಿತೆಯ ಮನೆಗೆ ಇಲಾಖಾ ಜೀಪಿನಲ್ಲಿ 2 ನೇ ಆರೋಪಿ, ಪಂಚರು, ಚಾಸಾ-23 ರವರು ಹಾಗೂ ಸಿಬ್ಬಂದಿಗಳು ಹೋಗಿರುತ್ತೇವೆ. ಆ ಸಮಯದಲ್ಲಿ ನಾನು ಮಹಜರನ್ನು ಬೆರಳಚ್ಚು ಮಾಡಿರುವುದಿಲ್ಲ. ಭದ್ರತೆಗಾಗಿ ಮಾತ್ರ ಹೋಗಿರುತ್ತೇನೆ. ನಾನು 2 ನೇ ಆರೋಪಿಯನ್ನು ಬಂಧಿಸುವಾಗ ಚಾಸಾ-21 ರವರಿಗೆ ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-2 ಮಹಜರು ಬೆರಳಚ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-29 ಮಹಜರು ಸಮಯದಲ್ಲಿ ನಾನು ಭದ್ರತೆಗಾಗಿ 2 ನೇ ಆರೋಪಿತೆ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮಹಜರು ವೇಳೆ ಮು.ಮಾ-1 ರಿಂದ ಮು.ಮಾ-3 ನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ, ಆರೋಪಿತೆಗೂ ಹಾಗೂ ಮು.ಮಾಗಳಿಗೂ ಯವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ